ಸಂಪುಟ: 2 । ಸಂಚಿಕೆ: 5 । ದಿನಾಂಕ: 21 ಸೆಪ್ಟೆಂಬರ್ 2019 ।ತುಮಕೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಸಂಚಿಕೆ । ಖಾಸಗಿ ಪ್ರಸಾರಕ್ಕಾಗಿ ಮಾತ್ರ

# ಕಲ್ಪತರು ಟೈಮ್ಸ್

**ಸಸ್ಯಾಹಾರಿಗಳ ಬಾಯಿಗೆ ವೆಜ್ ಮೊಟ್ಟೆ!** ಪು-2

**ಕಷ್ಟಗಳು ಹೆಚ್ಚಾದಂತೆ ಬುದ್ಧಿ ಚುರುಕಾಗಿ ಕೆಲಸ ಮಾಡುತ್ತದೆ. –ಎಮರ್ಸನ್**

**ಸವೆಯುವುದೇಕೆ ಈ ಸೆಳೆತ?** ಪು-2

## ಚಿತ್ರ ಸಂಪುಟ



ವಿವಿ ವಿಜ್ಞಾನ ಕಾಲೇಜಿನಲ್ಲಿ ಸೆ.5ರಂದು ಡಾ. ಎಸ್. ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಶಿಕ್ಷಕರ ದಿನವನ್ನು ಆಚರಿಸಲಾಯಿತು. ಪ್ರಾಂಶುಪಾಲೆ ಶಾಲಿನಿ ಬಿ.ಆರ್. ಹಾಗೂ ಉಪನ್ಯಾಸಕವೃಂದದವರು ಇದ್ದಾರೆ.




ಹೊಸಪೇಟೆಯ ತಪೋವನ ಆಶ್ರಮದ ಶ್ರೀ ಶಾಂತಾನಂದತೀರ್ಥ ಸ್ವಾಮೀಜಿಯವರು ವಿವಿ ಕಲಾ ಕಾಲೇಜಿನ ಎನ್.ಎಸ್.ಎಸ್. ಆಶ್ರಯದಲ್ಲಿ 'ನೈತಿಕ ಮೌಲ್ಯಾಧಾರಿತ ಶಿಕ್ಷಣ' ಕುರಿತು ಉಪನ್ಯಾಸ ನೀಡಿದರು. ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಇದ್ದಾರೆ.



ತುಮಕೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ಬಿ. ಟಿ. ಸಂಪತ್ ಕುಮಾರ್ ಗುಜರಾತಿನ ಸರದಾರ್ ಪಟೇಲ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ 'ಬೆಸ್ಟ್ ಎಲ್ಐಎಸ್ ಅಕಾಡೆಮಿಕ್ ಪ್ರೊಫೆಶನಲ್' ಪ್ರಶಸ್ತಿ ಸ್ವೀಕರಿಸಿದರು.



ವಿವಿ ಕಲಾ ಕಾಲೇಜಿನ ಇತಿಹಾಸ ವಿಭಾಗ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಸಂದರ್ಭ ವ್ಯಾಸಂಗದಲ್ಲಿ ಹೆಚ್ಚಿನ ಸಾಧನೆಗೈದ ಪ್ರಜ್ವಲ್ ಆರ್. ಸಿ., ಸುವರ್ಣ, ಆಕಾಶ್ ಎ. ಹಾಗೂ ಸಾಗರ್ ಎಂ. ಇವರನ್ನು ಪುರಸ್ಕರಿಸಲಾಯಿತು.



ಸೆ.4 ಹಾಗೂ 5ರಂದು ನಡೆದ ತುಮಕೂರು ವಿವಿ ಅಂತರ ಕಾಲೇಜು ಚದುರಂಗ ಪಂದ್ಯಾವಳಿಯಲ್ಲಿ ವಿವಿ ವಿಜ್ಞಾನ ಕಾಲೇಜಿನ ಪುರುಷರ ತಂಡವು ಛಾಂಪಿಯನ್‌ಷಿಪ್ ಪಡೆಯಿತು. ಹಿರಿಯ ಸಾಹಿತಿ ಸಿ.ಪಿ.ಕೆ., ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ, ಪ್ರಾಂಶುಪಾಲೆ ಶಾಲಿನಿ ಬಿ.ಆರ್., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎ.ಎಂ.ಮಂಜುನಾಥ್ ಇದ್ದಾರೆ.

# ವಿಶ್ವ ಓಜೋನ್ ದಿನ, ಜಲಶಕ್ತಿ ಅಭಿಯಾನ

## ■ ವಿಶ್ವವಿದ್ಯಾನಿಲಯದಲ್ಲಿ 'ಪ್ಲಾಸ್ಟಿಕ್ ಬಳಕೆ ನಿಷೇಧ' ಕುರಿತು ವಿಶೇಷ ಉಪನ್ಯಾಸ

**ತುಮಕೂರು:** ತುಮಕೂರು ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ಸಮಾಜಕಾರ್ಯ ವಿಭಾಗದಿಂದ ಸೆ.16ರಂದು ವಿಶ್ವ ಓಜೋನ್ ದಿನಾಚರಣೆ, ಜಲಶಕ್ತಿ ಅಭಿಯಾನ ಹಾಗೂ ಪ್ಲಾಸ್ಟಿಕ್ ಬಳಕೆಯ ನಿಷೇಧ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ವೈ.ಎಸ್. ಸಿದ್ದೇಗೌಡ ಮಾತನಾಡಿ, ಉನ್ನತ ಶಿಕ್ಷಣದ ಆಶಯ ಸಮಾಜಕ್ಕೆ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಕೊಡುಗೆ ನೀಡುವುದಷ್ಟೇ ಅಲ್ಲದೆ ಸುಸ್ಥಿರ ಪರಿಸರಾಭಿವೃದ್ಧಿ ಸಾಧಿಸುವುದು ಹಾಗೂ ಯುವ ಸಮುದಾಯವನ್ನು ಪರಿಸರ ಜಾಗೃತಿಗಾಗಿ ಸಿದ್ಧಗೊಳಿಸುವುದೂ ಆಗಿದೆ ಎಂದರು.

ಮಾನವ ನಿರ್ಮಿತ ಮತ್ತು ಸಹಜ ನೈಸರ್ಗಿಕ ಕ್ರಿಯೆಗಳ ಮೂಲಕ ಪರಿಸರ ವಿಪತ್ತು ಏರ್ಪಡುತ್ತದೆ. ವಿದ್ಯಾರ್ಥಿಗಳು ಮರಗಿಡಗಳನ್ನು ಬೆಳೆಸುವುದರಿಂದ ಪ್ರಕೃತಿ ಸೌಂದರ್ಯ ಹೆಚ್ಚುವುದಲ್ಲದೆ ಮಾಲಿನ್ಯ ಕೂಡ ನಿಯಂತ್ರಣದಲ್ಲಿರುತ್ತದೆ. ಜಾಗತಿಕ ತಾಪಮಾನ ಮತ್ತು ಪರಿಸರದ ಜಾಗತಿಕ ಸಮಸ್ಯೆ ಎದುರಾಗಿರುವುದರಿಂದ ಪ್ರಾಕೃತಿಕ ಸಂಪತ್ತನ್ನು ರಕ್ಷಿಸುವುದು ಅನಿವಾರ್ಯವಾಗಿದೆ ಎಂದರು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಾತಾವರಣದ ವೈಪರೀತ್ಯಗಳು ಹೆಚ್ಚಾಗಿದೆ. ಭಾರತದಲ್ಲಿ ಇದರ ಪರಿಣಾಮವಿದ್ದರೂ ನಮ್ಮ ವೈವಿಧ್ಯಮಯ ಪ್ರಾಕೃತಿಕ ಸಂಪನ್ಮೂಲಗಳು ಹಾಗೂ ಸನ್ನಿವೇಶಗಳು



ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಓಜೋನ್ ದಿನ ಹಾಗೂ ಜಲಶಕ್ತಿ ಅಭಿಯಾನವನ್ನು ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಉದ್ಘಾಟಿಸಿದರು.

ಇಲ್ಲಿನ ಸಾಂಸ್ಕೃತಿಕ ಪರಂಪರೆಗೆ ಒಗ್ಗಿಕೊಳ್ಳುವ ಪಾಠವನ್ನು ಕಲಿಸುತ್ತಿವೆ. ಯುವಜನರು ಇದನ್ನು ಅರ್ಥಮಾಡಿಕೊಂಡು ಗಾಳಿ ನೀರು ಭೂಮಿಯನ್ನು ಸಂರಕ್ಷಿಸಬೇಕು ಮತ್ತು ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ನೀಡಬೇಕು ಎಂದು ಕರೆನೀಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೊಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ರಾಜಾನಾಯಕ್, ಮನುಷ್ಯನು ತನ್ನ ದೈನಂದಿನ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ವೇಳೆ ತಾನು ಜೀವಿಸುತ್ತಿರುವ ಪರಿಸರದ ಬಗ್ಗೆ ಕಾಳಜಿ ಕಳೆದುಕೊಳ್ಳದೆ ಪರಿಸರ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂತೋಷ್ ಕುಮಾರ್, ಡಾ. ಸುಜಾತ, ಭೂಷಣ್ ಕುಮಾರ್ ಹಾಜರಿದ್ದರು.

# 'ವಿಶ್ವವಿದ್ಯಾನಿಲಯಗಳು ಹೊಸ ಆವಿಷ್ಕಾರಗಳಿಗೆ ಕಾರಣವಾಗಬೇಕು'

**ತುಮಕೂರು:** ವಿಶ್ವವಿದ್ಯಾನಿಲಯಗಳು ಹೊಸ ಆವಿಷ್ಕಾರಗಳಿಗೆ ಕಾರಣವಾಗಬೇಕು ಎಂದು ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ತಿಳಿಸಿದರು.



ವಿವಿ ವಿಜ್ಞಾನ ಕಾಲೇಜಿನ ಗಣಿತಶಾಸ್ತ್ರ ವಿಭಾಗವು ಆಯೋಜಿಸಿದ್ದ ಕಾರ್ಯಾಗಾರವನ್ನು ಕುಲಪತಿ ಪ್ರೊ. ವೈ. ಎಸ್. ಸಿದ್ದೇಗೌಡ ಉದ್ಘಾಟಿಸಿದರು.

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ವತಿಯಿಂದ ಸೆ.20 ರಂದು ಆಯೋಜಿಸಲಾಗಿದ್ದ 'ಉನ್ನತ ವ್ಯಾಸಂಗದಲ್ಲಿ ಗಣಿತಶಾಸ್ತ್ರದಲ್ಲಿರುವ ಅವಕಾಶಗಳು' ಎಂಬ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಸಂಶೋಧನ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಗುಬ್ಬಿ ಸಿಐಟಿಯ ಡಾ. ಸಿ. ಆರ್. ಪ್ರದೀಪ್ ಮಾತನಾಡಿ, ವಿದ್ಯಾರ್ಥಿಗಳು ಕಲಿಯುವ ವಿಷಯದಲ್ಲಿ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲೆ ಶಾಲಿನಿ ಬಿ. ಆರ್. ವಹಿಸಿದ್ದರು. ಕಾರ್ಯಾಗಾರದ ಸಂಯೋಜಕರಾದ ಡಾ. ನರಹರಿ ಎನ್. 'ಜಾಮ್' ಪರೀಕ್ಷೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ಕಾಲೇಜುಗಳಿಂದ 300ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

# ಡಾ.ಪರಮಶಿವಮೂರ್ತಿಗೆ ನೊಳಂಬ ಪ್ರಶಸ್ತಿ

**ತುಮಕೂರು:** ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಮತ್ತು ಸಂಶೋಧಕ ಡಾ.ಡಿ.ವಿ. ಪರಮಶಿವಮೂರ್ತಿಯವರಿಗೆ ಕರ್ನಾಟಕ ಇತಿಹಾಸ ಅಕಾಡೆಮಿಯ 'ನೊಳಂಬ ಇತಿಹಾಸ ಪ್ರಶಸ್ತಿ' ಲಭಿಸಿದೆ.



ಅವರ 'ನೊಳಂಬ ಶಾಸನಗಳು' ಎಂಬ ಕೃತಿಗೆ ಈ ಪ್ರಶಸ್ತಿ ಸಂದಿದೆ. ಶಿವಮೊಗ್ಗ ಜಿಲ್ಲೆಯ ಹೊಂಬುಜ ಜೈನಮಠದಲ್ಲಿ ಮುಂದಿನ ತಿಂಗಳು ನಡೆಯುವ ವಾರ್ಷಿಕ ಸಮ್ಮೇಳನದಲ್ಲಿ ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ. 'ನೊಳಂಬ ಶಾಸನಗಳು' ದಕ್ಷಿಣ ಭಾರತದ ಬಹುಭಾಗವನ್ನು ಆಳ್ವಿಕೆ ನಡೆಸಿದ ನೊಳಂಬರ ಚರಿತ್ರೆ ಮತ್ತು ಸಂಸ್ಕೃತಿಯನ್ನು ತಿಳಿಸುವ ಬೃಹತ್ ಕೃತಿಯಾಗಿದೆ.

# 'ಸಾಹಿತ್ಯದಿಂದ ಸಂವೇದನೆ ವೃದ್ಧಿ'

**ತುಮಕೂರು:** ಸಾಹಿತ್ಯದ ಅಧ್ಯಯನ ಸಂವೇದನೆಯನ್ನು ಹೆಚ್ಚಿಸುತ್ತದೆ ಎಂದು ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಪ್ರಾಧ್ಯಾಪಕ ಪ್ರೊ. ಎಚ್. ಕೆ. ಶಿವಲಿಂಗಸ್ವಾಮಿ ಅಭಿಪ್ರಾಯಪಟ್ಟರು.

ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಇಂಗ್ಲಿಷ್ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ 'ಸಾಹಿತ್ಯದ ಅಧ್ಯಯನ ಹೇಗೆ? ಯಾಕೆ?' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ ಸಾಹಿತ್ಯ ಮತ್ತು ಭಾಷೆಗಳ ಅಧ್ಯಯನದಿಂದ ಬದುಕಿನ ಬಗೆಗಿನ ದೃಷ್ಟಿಕೋನ ಬದಲಾಗುತ್ತದೆ. ಸಾಹಿತ್ಯದ ಅಧ್ಯಯನಕ್ಕೆ ಪೂರಕವಾದ ಭಾಷಾಪ್ರಭುತ್ವಕ್ಕೂ ವಿದ್ಯಾರ್ಥಿಗಳು ಹೆಚ್ಚಿನ ಒತ್ತನ್ನು ನೀಡಬೇಕಿದೆ ಎಂದರು.

ಆಳವಾದ ಓದಿನಿಂದ ಜೀವನಪ್ರೀತಿ ಹಾಗೂ ಆತ್ಮವಿಶ್ವಾಸ ಸಹಜವಾಗಿಯೇ ಮೈದಳೆಯುತ್ತದೆ. ಯುವಮನಸ್ಸುಗಳಿಗೆ ಇವು ತುಂಬ ಅವಶ್ಯಕ ಎಂದರು.

ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಂಶುಪಾಲ ಟಿ.ಎನ್. ಹರಿಪ್ರಸಾದ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಬಿ.ಎನ್. ವೇಣುಗೋಪಾಲ, ಸಹಾಯಕ ಪ್ರಾಧ್ಯಾಪಕರಾದ ಡಾ. ಸಿ. ಎಂ. ರವಿ, ಡಾ. ವಿ. ಸುಬ್ರಹ್ಮಣ್ಯಶರ್ಮ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ವಿವಿ ಕಲಾ ಕಾಲೇಜಿನ ಇಂಗ್ಲಿಷ್ ವಿಭಾಗವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಪ್ರೊ. ಎಚ್. ಕೆ. ಶಿವಲಿಂಗಸ್ವಾಮಿ ಮಾತನಾಡಿದರು.

## ಸಂಪಾದಕೀಯ

# ಇ-ಸಿಗರೇಟ್‌ಗೆ ಖೊಕ್

ಕೇಂದ್ರ ಸರ್ಕಾರದ ಸಚಿವ ಸಂಪುಟ ಸಭೆಯು ಸುಗ್ರೀವಾಜ್ಞೆ ಮೂಲಕ ಇ–ಸಿಗರೇಟನ್ನು ನಿಷೇಧಿಸಿದ್ದು, ವಿವಿಧ ವಾದಗಳು ಕೇಳಿಬರುತ್ತಿವೆ.



ಜನರು ಧೂಮಪಾನ ಚಟದಿಂದ ದೂರ ಉಳಿಯಲಿ ಎಂಬ ಉದ್ದೇಶದಿಂದ ಇ–ಸಿಗರೇಟ್ ಮಾರಾಟಕ್ಕೆ ಪ್ರೋತ್ಸಾಹ ನೀಡಲಾಗಿತ್ತು.

ಇ–ಸಿಗರೇಟ್‌ಗಳನ್ನು ತಯಾರಿಸಲು ಇ–ಲಿಕ್ವಿಡ್ ಎಂಬ ದ್ರಾವಣವನ್ನು ಬಳಸಲಾಗಿದೆ. ಇ–ಸಿಗರೇಟ್‌ಗಳಲ್ಲಿರುವ ಬ್ಯಾಟರಿಗಳನ್ನು ಚಾರ್ಜ್ ಮಾಡಬಹುದು. ಧೂಮಪಾನದಲ್ಲಿ ಬರುವ ಹೊಗೆಗೆ ಬದಲಾಗಿ ಇ–ಸಿಗರೇಟ್‌ನಲ್ಲಿ ಆವಿ(ವೇಪರ್) ರೂಪದಲ್ಲಿ ಏರೋಸಾಲ್ ಅನ್ನು ಉಸಿರಾಡುತ್ತಾರೆ.

ಇ–ಸಿಗರೇಟ್ ಸೇವಿಸುವುದರಿಂದ ಮನುಷ್ಯರಿಗೆ ತೊಂದರೆಯಾಗುವುದಿಲ್ಲ ಎಂದು ತಯಾರಕರು ಹೇಳಿದ್ದಾರೆ. ತಜ್ಞರ ಪ್ರಕಾರ ಇ–ಸಿಗರೇಟ್ ಅಪಾಯಕಾರಿಯಾಗಿದೆ. ಪ್ರೊಪೈಲೀನ್, ಗ್ಲೂಕಾಲ್, ಗ್ಲಿಸರಿನ್, ನಿಕೋಟಿನ್ ಮತ್ತು ಸುಗಂಧ ದ್ರವ್ಯಗಳನ್ನು ಇ–ಸಿಗರೇಟಿಗೆ ಸೇರಿಸಿರುತ್ತಾರೆ. ಇವು ದೇಹಕ್ಕೆ ಮಾರಕವಾಗಿವೆ. ಇ–ಸಿಗರೇಟ್ ಮಾರುಕಟ್ಟೆಗೆ ಪ್ರವೇಶಿಸಿದಾಗ ಜಾಗತಿಕ ಮಟ್ಟದಲ್ಲಿ ಬಳಕೆ ತೀವ್ರವಾಗಿದೆ. ಅಮೇರಿಕಾದಲ್ಲಿ ಶಾಲಾ ಮಕ್ಕಳು ಸಹ ಶೇ.13 ರಷ್ಟು ಇ–ಸಿಗರೇಟ್‌ನ್ನು ಬಳಸುತ್ತಿರುವ ಬೆಳವಣಿಗೆ ಆತಂಕಕಾರಿ.

ಇ–ಸಿಗರೇಟ್ ಬಳಕೆಯಿಂದ ಹೊಟ್ಟೆನೋವು, ತಲೆನೋವು, ಮಸುಕಾದ ದೃಷ್ಟಿ, ಗಂಟಲು ಮತ್ತು ಬಾಯಿ ಕಿರಿಕಿರಿ, ವಾಂತಿ, ಕೆಮ್ಮು ಇನ್ನು ಮುಂತಾದ ಆರೋಗ್ಯ ಸಮಸ್ಯೆಗಳ ಜೊತೆಗೆ ಶ್ವಾಸಕೋಶದ ಕಾಯಿಲೆಗಳು ಸಂಭವಿಸುತ್ತವೆ.

ಇ–ಸಿಗರೇಟ್‌ಗಳ ಬಳಕೆಯಿಂದ ತಂಬಾಕು ಬೆಳೆಯುವಂತಹ ಬೆಳೆಗಾರರಿಗೆ ನಷ್ಟ ಎಂದೆನಿಸಬಹುದು. ಆದರೆ, ಇ–ಸಿಗರೇಟ್ ವಿದ್ಯುನ್ಮಾನ ತಂಬಾಕು ಮಾದಕ ವಸ್ತುಗಳನ್ನು ಒಳಗೊಂಡಿರುವುದರಿಂದ ನಿಷೇಧಿಸಬೇಕು ಎಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುತ್ತೋಲೆ ಹೊರಡಿಸಿದೆ. ಇ–ಸಿಗರೇಟ್‌ನ್ನು ನಾರ್ವೆ, ಸಿಂಗಾಪುರ್, ದೇಶಗಳಲ್ಲಿ ನಿಷೇಧಿಸಿದ್ದು ಕೇಂದ್ರ ಸರ್ಕಾರದ ಈ ನಡೆ ಸ್ವಾಗತಾರ್ಹ.

# ಸವೆಯುವುದೇಕೆ ಈ ಸೆಳೆತ?

**ಒಳನೋಟ**
ನಿಸರ್ಗ ಸಿ.ಎ.

**ಸಂಬಂಧಗಳಲ್ಲಿ ಇದ್ದಕ್ಕಿದ್ದಂತೆ ಸ್ಲೋ ಫೇಡಿಂಗ್ ಶುರುವಾಗುತ್ತದೆ. ಭಾವನೆಗಳು ನಿಧಾನವಾಗಿ ಸಡಿಲಗೊಳ್ಳುತ್ತವೆ. ಇಬ್ಬರ ದಾರಿ ಕವಲೊಡೆಯುತ್ತದೆ.**

ದೇಶ, ಸಾಮಾಜಿಕ ವರ್ಗ, ಜನಾಂಗ, ಧರ್ಮ, ವಯಸ್ಸು ಲೈಂಗಿಕ ದೃಷ್ಟಿಕೋನ ಮತ್ತು ಲಿಂಗದಂತಹ ಅಸ್ಥಿರಾಂಶಗಳ ಪ್ರಕಾರ ಡೇಟಿಂಗಿಗೆ ಸಂಬಂಧಿಸಿದ ಸಾಮಾಜಿಕ ನಿಯಮಗಳು ಗಣನೀಯವಾಗಿ ಸಂಬಂಧಗಳನ್ನು ಬದಲಾಯಿಸುತ್ತವೆ. ವರ್ತನೆಯ ಮಾದರಿಗಳು ಸಾಮಾನ್ಯವಾಗಿ ನಿರಂತರವಾಗಿ ಬದಲಾಗುತ್ತವೆ. ಸಾಮಾಜಿಕ ಮತ್ತು ವೈಯಕ್ತಿಕ ಮೌಲ್ಯಗಳ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ.

ಸಾಮಾನ್ಯವಾಗಿ ಇಬ್ಬರ ಜೊತೆಗಿರಲು ಬಯಸುವವರು ತಮ್ಮ ಸಂಬಂಧ ಶಾಶ್ವತವಾಗಿ ಉಳಿಯುವುದೇ ಎಂದು ಪರೀಕ್ಷಿಸಲು ಡೇಟಿಂಗ್‌ನ್ನು ಪ್ರಾಯೋಗಿಕ ಅವಧಿಯಾಗಿ ಬಳಸುತ್ತಾರೆ.

ಈಗ ಆನ್‌ಲೈನ್ ಡೇಟಿಂಗ್ ಆ್ಯಪ್‌ಗಳ ಜಮಾನ. ಟಿಂಡರ್, ಬಂಬಲ್, ಒಕೆ ಕ್ಯೂಪಿಡ್ ಹೀಗೆ ಎಲ್ಲಾ ಆ್ಯಪ್‌ಗಳು ನಮ್ಮಗಿಷ್ಟವಾದವರನ್ನು ಬೇಟಿ ಮಾಡಲು ಒಳ್ಳೆಯ ಅವಕಾಶ ಆದರೆ ಹೆಚ್ಚಾಗಿ ಪ್ರೊಫೈಲ್ ಫೋಟೊಗಳನ್ನು ಆಧರಿಸುವ ಈ ವೇದಿಕೆಗಳು ಹೊಸತರಲ್ಲಿ ಆಕರ್ಷಣೀಯ ಎನಿಸಿದರೂ, ಕಾಲ ಕಳೆದಂತೆ ಸ್ಲೋ ಫೇಡ್ ಡೇಟಿಂಗ್ ಆಗಿ ಪರಿಣಮಿಸುತ್ತದೆ. ಹೊಸ ಜನರನ್ನು ಭೇಟಿಯಾಗಲು ತಮ್ಮ ಹೊಂದಾಣಿಕೆಯನ್ನು ಅರಿಯಲು ಮತ್ತು ಸಂವಾದನ್ನು ಪ್ರಾರಂಭಿಸಲು ಸಹಾಯಕಾರಿ. ಸಂಬಂಧಗಳು ತಂತ್ರಜ್ಞಾನದ ಹೆಸರಿನಲ್ಲಿ ಅರ್ಥಹೀನವಾಗುತ್ತಿರುವ ಬೆಳವಣಿಗೆಯನ್ನು ಸ್ಲೋ ಫೇಡ್ ಟ್ರೆಂಡ್ ಎಂದು ಗುರುತಿಸಲಾಗಿದೆ.

ಪರಿಚಯವೊಂದು ಆತ್ಮೀಯ ಬಂಧವಾಗಿ ತಂತ್ರಜ್ಞಾನದ ಅತಿಯಾದ ಬಳಕೆ ಅಥವಾ ಹಸ್ತಕ್ಷೇಪದಿಂದ ಕಳಹೀನಾವಾಗುವುದೇ ಸ್ಲೋ ಫೇಡ್ ಡೇಟಿಂಗ್. ನಿಮಿಷಕ್ಕೊಂದು ಮೆಸೇಜು, ತಾಸಿಗೊಮ್ಮೆ ಮಾಡುವ ಕರೆ ಇಬ್ಬರ ನಡುವೆ ಗಟ್ಟಿಯಾದ ಸಂಬಂಧವನ್ನು ಬೆಸೆಯುತ್ತದೆ. ಅವು ನಾನಾ ಹೆಸರಿನಲ್ಲಿ ಗುರುತಿಸಿಕೊಳ್ಳುತ್ತವೆ. ಅದು ಸ್ನೇಹ, ಪ್ರೇಮ, ಅಕ್ಕತಂಗಿಯ, ಅಣ್ಣತಮ್ಮನ ಅಥವಾ ಇನ್ಯಾವುದೇ ಇರಬಹುದು. ಆದರೆ ಸೆಳೆತವೊಂದು ತೀವ್ರತೆ ಕ್ಷೀಣಿಸಿದಾಗ ಅದು ವಾರ, ತಿಂಗಳು ಅಥವಾ ವರ್ಷ ಕಳೆಯುವ ಹೊತ್ತಿಗೆ



ಒಂದು ಕಾಲ್ ಅಥವಾ ಮೆಸೇಜಿಗೆ ಬಂದು ನಿಲ್ಲುತ್ತದೆ. ಕೊನೆಗೊಂದು ದಿನ ಅಂಥದ್ದೊಂದು ಉತ್ಕಟ ಭಾವ ಬದುಕಿಯೇ ಇಲ್ಲವೇನೋ ಎನ್ನುವ ಮಟ್ಟಿಗೆ ಬತ್ತಿ ಹೋಗುತ್ತದೆ. ಕೆಲವು ಸಂಬಂಧಗಳೇ ಹಾಗೆ. ಆರಂಭದಲ್ಲಿ ಆಕರ್ಷಣೆಗೆ ಒಳಗಾಗುತ್ತಾರೆ. ಆದರೆ ಆ ಆಕರ್ಷಣೆ ಕೊನೆಯವರೆಗೂ ಉಳಿಯುವುದಿಲ್ಲ.

ಆರಂಭದಲ್ಲಿ ಆಕರ್ಷಣೆಯಿಂದ ಶುರುವಾದ ಪರಿಚಯ ಸ್ನೇಹವಾಗಿ ಗಟ್ಟಿಯಾಗಿ ಉಳಿಯುವುದು ಅಪರೂಪ. ಬೆಸೆದ ಬಂಧಕ್ಕೊಂದು ಉದ್ದೇಶ ಇಲ್ಲದೆ ಹೋದಾಗ ಅಂತಹ ಸಂಬಂಧಗಳು ಬಹು ಬೇಗ ಮಾಸುವ ಸಾಧ್ಯತೆ ಇರುತ್ತದೆ. ಯಾವಾಗಲೂ ಫೋನಿನಲ್ಲೆ ಮುಳುಗಿದ್ದರೂ, ತಮ್ಮವರಿಗಾಗಿ ಸಮಯವಿಲ್ಲ ಎನ್ನುವುದು ಯುವಜನತೆಯ ಧೋರಣೆಯಾಗಿದೆ ಎಂದು ಮನೋವಿಜ್ಞಾನವನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿ ರಮ್ಯ ತಮ್ಮ ಅಭಿಪ್ರಾಯ ತಿಳಿಸಿದರು.

ಮೊದಲು ತಮಗೆ ಬರುವ ಸಂದೇಶಗಳಿಗಾಗಿ ಕಾಯುತ್ತಿದ್ದ ಅಥವಾ ತಕ್ಷಣ ಪ್ರತಿಕ್ರಿಯಿಸುತ್ತಿದ್ದವರು ಇದೀಗ ತಾಸುಗಳಷ್ಟು ಸಮಯ ತೆಗೆದುಕೊಳ್ಳುತ್ತಾರೆ. ಕೆಲವೊಮ್ಮೆ ಪ್ರತಿಕ್ರಿಯೆ ಚುಟುಕಾಗಿರಬಹುದು ಅಥವಾ ಅದರಲ್ಲಿ ಯಾವುದೇ ಭಾವನೆಗಳು ಇಲ್ಲದಿರಬಹುದು. ಈ ವ್ಯತ್ಯಾಸವನ್ನು ನಿಮ್ಮ ಹಿಂದಿನ ಅನುಭವದ ಮೂಲಕ ಗುರುತಿಸಬಹುದು.

ನಿಮ್ಮ ಮಾತುಗಳಿಗೆ ಆಸಕ್ತಿ ತೋರದೆ ಇರಬಹುದು. ಆದರೆ ಅವರಿಗೆ ನೀವು ಆದ್ಯತೆ ಆಗಿರುವುದಿಲ್ಲ. ಒಂದಿಷ್ಟು ಸಮಯ ಕಾಯುವ ತಾಳ್ಮೆ ಇರಲಿ. ಅನಗತ್ಯ ಅನುಮಾನ ಅಥವಾ ದುಡುಕುವ ಸ್ವಭಾವ ನಿಮ್ಮ ಪ್ರಾಮಾಣಿಕ ಸಂಬಂಧವನ್ನು ಹಾಳು ಮಾಡದಿರಲಿ.

ತಂತ್ರಜ್ಞಾನದ ಉತ್ಕಟತೆಯ ಕಾಲಘಟ್ಟದಲ್ಲಿ ತಂತ್ರಜ್ಞಾನ ಆಧಾರಿತ ಸಂಭಾಷಣೆ, ಭಾವನೆಗಳ ತಿರುಳಿಲ್ಲದ ಬರಿ ಒಣ ಮಾತಾಗಿದೆ. ಆದರೆ ನಿಜವಾದ ಪ್ರಶ್ನೆಯೆಂದರೆ ತೋರಿಕೆಯಲ್ಲದ ಸುದೀರ್ಘ ಸಂಭಾಷಣೆಯಲ್ಲಿ ಹೂಡಿಕೆ ಮಾಡಲು ಜನರಿಗೆ ನಿಜವಾಗಿಯೂ ಸಮಯ ಮತ್ತು ತಾಳ್ಮೆ ಇದೆಯೇ? ವೇಗವಾಗಿ ಓಡುವ ಯುಗದಲ್ಲಿ ಸಂಬಂಧಗಳು ಹಿಂದುಳಿಯುತ್ತಿವೆ.

ನಿಧಾನವಾಗಿ ಮಾಸುವ ಸಂಬಂಧಗಳಲ್ಲಿ ಬಿಟ್ಟಿರಲು ಅಸಾಧ್ಯ ಎನ್ನುವಷ್ಟು ಹಚ್ಚಿಕೊಂಡವರು ದೂರವಾಗುತ್ತಾರೆ. ಬಹುತೇಕ ಸಮಯದಲ್ಲಿ ಗಂಭೀರ ಕಾರಣವಿರುವುದಿಲ್ಲ. ಮುನಿಸು, ಅಸಮಾಧಾನದ ಪ್ರಭಾವವೂ ಕಡಿಮೆಯೇ ಇರುತ್ತದೆ. ದಿನ ಕಳೆದಂತೆ ಸೆಳೆತ ಕಳೆದುಕೊಳ್ಳುವ ಇದರಲ್ಲಿ ನಿರಾಸಕ್ತಿ ಅಥವಾ ನಿರ್ಲಕ್ಷ್ಯ ಎದ್ದು ಕಾಣುತ್ತದೆ. ವ್ಯಕ್ತಿ ಅಥವಾ ಆಕರ್ಷಿಸುವ ಸಂಗತಿಯ ಬಗ್ಗೆ ಆಸಕ್ತಿ ಕಳೆದುಕೊಳ್ಳಬಹುದು. ಹೀಗೆ ಬಂದು ಹಾಗೆ ಹೋಗುವ ಸಂಬಂಧದ ಆಯಸ್ಸು ಕೂಡ ಅಷ್ಟಕಷ್ಟೆ. ಇಂತಹ ಸಂಬಂಧಗಳನ್ನು ಹಗುರವಾಗಿ ತೆಗೆದುಕೊಂಡರೆ ಅಥವಾ ಗಂಭೀರ ಹಂತವನ್ನು ತಲುಪದಿದ್ದರೆ, ಈ ಅಲ್ಪಕಾಲಿಕ ಬಂಧಗಳಿಂದ ಪಡೆಯುವುದು ಹಾಗೂ ಕಳೆದುಕೊಳ್ಳುವುದು ಏನೂ ಇಲ್ಲ. ಆದರೆ ಯಾವುದೇ ಸಂಬಂಧದಲ್ಲಿ ಗುರುತಿಸಿಕೊಳ್ಳುವ ಮುನ್ನ ಎಚ್ಚರವಹಿಸಿ.

# ಸಸ್ಯಾಹಾರಿಗಳ ಬಾಯಿಗೆ ವೆಜ್ ಮೊಟ್ಟೆ!

ಮೊಟ್ಟೆ ತಿನ್ನಲು ಬಯಸುವ ಅಪ್ಪಟ ಸಸ್ಯಾಹಾರಿಗಳು ಅದು ಮಾಂಸಾಹಾರವೋ ಅಥವಾ ಸಸ್ಯಾಹಾರವೋ ಎಂಬ ಗೊಂದಲದಲ್ಲಿ ತಮ್ಮ ಬಯಕೆನ್ನೇ ಕೈಬಿಟ್ಟಿದ್ದಾರೆ. ಅಂತಹವರಿಗೆ ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಟಿ) ಸಂಶೋಧಕರು ಗಿಡದಲ್ಲಿ ಮೊಟ್ಟೆ ಬೆಳೆಸುವ ಮೂಲಕ ಸಂತಸ ಮೂಡಿಸಿದ್ದಾರೆ.

**ಹೌದಾ!**

ಭಾರತೀಯರು ಸಾಮಾನ್ಯವಾಗಿ ಬೇಳೆಕಾಳುಗಳ ಮೂಲಕ ಅಗತ್ಯ ಪೌಷ್ಟಿಕಾಂಶಗಳನ್ನು ಪಡೆದುಕೊಳ್ಳುತ್ತಾರೆ. ಅದರಲ್ಲೂ ದ್ವಿದಳ ಧಾನ್ಯಗಳು ಹೆಚ್ಚು ಪೋಷಕಾಂಶವನ್ನು ಹೊಂದಿವೆ. ಆ ನಿಟ್ಟಿನಲ್ಲಿ ಯೋಚಿಸಿ, ಐಐಟಿಯ ಸಂಶೋಧಕರು ಹೆಸರು ಬೇಳೆಯನ್ನು ಬಳಸಿ ಮೊಟ್ಟೆಯನ್ನು ತಯಾರಿಸಿದ್ದಾರೆ.

ಹೆಸರು ಬೇಳೆಯಲ್ಲಿ ಕೋಳಿ ಮೊಟ್ಟೆಯ ಬಿಳಿ ಭಾಗದಲ್ಲಿರುವಷ್ಟೇ ಪೌಷ್ಟಿಕಾಂಶ ಇದೆ. ಆದ್ದರಿಂದ ಸಸ್ಯಹಾರಿ ಮೊಟ್ಟೆಯಲ್ಲಿ ಹೆಸರು ಬೇಳೆಯನ್ನು ಬಳಸಿಕೊಂಡಿದ್ದಾರೆ. ಇದು ಸಾಯ್ ಮತ್ತು ಗ್ಲುಟೆನ್ ಮುಕ್ತವಾಗಿದ್ದು, ಈ ಮೊಟ್ಟೆಯನ್ನು ದೆಹಲಿ ಐಐಟಿಯಲ್ಲಿ ಆಯೋಜನೆಗೊಂಡಿದ್ದ ಕೈಗಾರಿಕಾ ದಿನ–2019ರಲ್ಲಿ ಮೊದಲ ಬಾರಿಗೆ ಪ್ರದರ್ಶಿಸಿದ್ದಾರೆ.

ಈ ಮೊಟ್ಟೆಗಳು ಕೋಳಿ ಮೊಟ್ಟೆಯ ಆಕಾರದ ಬದಲು ಘನ ಆಕಾರದಲ್ಲಿ ದೊರೆಯುತ್ತದೆ. ಅದನ್ನು ಸುಲಭವಾಗಿ ಪುಡಿ ಮಾಡಿ, ನೀರಿನಲ್ಲಿ ಬೆರೆಸಿ, ಬೇಯಿಸಿ ಆಮ್ಲೆಟ್ ಮಾಡಿಕೊಂಡು ತಿನ್ನಬಹುದು. ಇದಕ್ಕೂ ಕೋಳಿ ಮೊಟ್ಟೆಗಳಿಂದ ತಯಾರಿಸುವ ಆಮ್ಲೆಟ್‌ನಷ್ಟೇ ರುಚಿ. ವೆಚ್ಚವೂ ಅಷ್ಟೇ.

ಕೋಳಿ ಮೊಟ್ಟೆಯಲ್ಲಿ ಕೊಲೆಸ್ಟ್ರಾಲ್ ಹಾಗೂ ಅಲರ್ಜಿ ಸಮಸ್ಯೆಗಳು ಇರುತ್ತವೆ. ಆದರೆ, ಸಸ್ಯಾಹಾರದ ಈ ಮೊಟ್ಟೆಯಲ್ಲಿ ಅಂತಹ ಯಾವುದೇ ಸಮಸ್ಯೆಗಳಿಲ್ಲ. ಕೋಳಿ ಮೊಟ್ಟೆ ತಿನ್ನದೇ ಇರುವವರು ಸಸ್ಯಾಹಾರದ ಮೊಟ್ಟೆಯನ್ನು ತಿಂದು, ಕೋಳಿ ಮೊಟ್ಟೆಯಲ್ಲಿ ದೊರೆಯುತ್ತಿದ್ದ ಎಲ್ಲ ಪೌಷ್ಟಿಕಾಂಶಗಳನ್ನು ಪಡೆದುಕೊಳ್ಳಬಹುದು. ಐಐಟಿಯ ಈ ಪ್ರಯೋಗದಿಂದ ಶುದ್ಧ ಸಸ್ಯಾಹಾರಿಗಳೀಗ ಸಮಾಧಾನದ ನಿಟ್ಟುಸಿರು ಬಿಡಬಹುದು.

ಉಮೇಶ

# ಜನರ ಮನಗೆದ್ದ ಪೈಲ್ವಾನ್

**ವಿಮರ್ಶಾ ಲೋಕ**

**ಚಿತ್ರ:** ಪೈಲ್ವಾನ್
**ನಿರ್ಮಾಣ:** ಸ್ವಪ್ನ ಕೃಷ್ಣ
**ನಿರ್ದೇಶನ:** ಕೃಷ್ಣ
**ತಾರಾಗಣ:** ಸುದೀಪ್, ಸುನೀಲ್ ಶೆಟ್ಟಿ, ಆಕಾಂಕ್ಷ ಸಿಂಗ್, ಕಬೀರ್ ದುಹಾನ್ ಸಿಂಗ್

ಇತ್ತೀಚೆಗೆ ಸೂಪರ್ ಸ್ಟಾರ್‌ಗಳನ್ನು ವಿಜೃಂಭಿಸುವ ಸಿನಿಮಾಗಳು ಬರುತ್ತಿವೆ. ಇಂತಹ ಸಿನಿಮಾಗಳ ಅಭಿಮಾನಿಗಳಿಗೆ 'ಪೈಲ್ವಾನ್' ಇಷ್ಟವಾಗುತ್ತಾನೆ.

ಸುದೀಪ್(ಕೃಷ್ಣ) ಅನಾಥ ಹುಡುಗ, ಸುನೀಲ್ ಶೆಟ್ಟಿ (ಸರ್ಕಾರ್) ಶ್ರೀಮಂತ ಉದ್ಯಮಿ. ದೇಶಪಾಂಡೆ ಅವರ ಮಗಳು ಆಕಾಂಕ್ಷ ಸಿಂಗ್ (ರುಕ್ಮಿಣಿ). ಕಬೀರ್ ದುಹಾನ್(ಟೋನಿ) ಬಾಕ್ಸಿಂಗ್ ಚಾಂಪಿಯನ್. ಇಷ್ಟೆಲ್ಲ ಪಾತ್ರಗಳಿದ್ದರೂ ನಾಯಕನ ವಿಜೃಂಭಣೆಯ ಸಲುವಾಗಿಯೇ ನಿರ್ದೇಶಕ ಕೃಷ್ಣನ ಸುತ್ತಲೇ ಕಥೆಯನ್ನು ಹೆಣೆದರೇನೋ ಎಂದು ಭಾಸವಾಗುತ್ತದೆ.

ಕ್ರೀಡಾಪಟುಗಳ ಆಧಾರಿತವಾಗಿ ಈಗಾಗಲೇ ಸಾಕಷ್ಟು ಸಿನಿಮಾಗಳು ಬಂದಿವೆ. ಕೆಲವೊಂದು ಕಾಲ್ಪನಿಕ ಕಥೆಗಳಾಗಿದ್ದರೆ, ಮೇರಿ ಕೋಮ್, ಸುಲ್ತಾನ್, ದಂಗಲ್ ಅಂತಹ ಸಿನಮಾಗಳು ನೈಜ ಕಥೆಯನ್ನು ಆಧರಿಸಿವೆ. ಇಲ್ಲಿ ಕಾಲ್ಪನಿಕ ಕಥಾಹಂದರವನ್ನಿಟ್ಟುಕೊಂಡೇ ನಿರ್ದೇಶಕ ಯಾವುದೇ ಧಾವಂತವೂ ಇಲ್ಲದೆ ಕಥೆಯನ್ನು ನಿರೂಪಿಸಿದ್ದಾರೆ.

ಸಿನಿಮಾದ ಮಧ್ಯಂತರದವರೆಗೂ ನಾಯಕನ ಪಾತ್ರ ಪರಿಚಯಕ್ಕೆ ಪೂರಕವಾದ ಸನ್ನಿವೇಶಗಳು; ಚಿತ್ರದ ನಿಜವಾದ ಕಥೆ ಏನು ಎಂದು ತಿಳಿಯವುದು ಮಧ್ಯಂತರದ ನಂತರವೇ. ಆದರೆ ಫ್ಲಾಷ್‌ಬ್ಯಾಕ್ ಕಥೆಯನ್ನು ಎಡಿಟಿಂಗ್ ಕೌಶಲ್ಯ ಮರೆಸುತ್ತದೆ. ಉಳಿದಂತೆ ನಾಲ್ಕೈದು ಮಂದಿಯ ಜಗಳಗಳ ನಡುವೆ, ನಾಯಕ ಮತ್ತು ನಾಯಕಿಯ ಪ್ರೀತಿ. ಹೀಗೆ ಮುಕ್ಕಾಲು ಭಾಗ ಕಥೆ ಮುಗಿಯುವುದರೊಳಗೆ ಒಂದು ಆದರ್ಶದ ರೀತಿಯಲ್ಲಿ ಕಾಣುತ್ತದೆ.

ಕ್ರೀಡಾ ಪ್ರತಿಭೆಯುಳ್ಳ ಮಕ್ಕಳು ಬಡತನದ ಕಾರಣದಿಂದ ತಮ್ಮ ಆಸೆಗೆ ತಣ್ಣೀರೆರಚಿಕೊಂಡು ದುಡಿಯುವುದನ್ನು ಕಂಡು ನಾಯಕನ ಮನಸ್ಸು ಕರಗುತ್ತದೆ. ಅವರನ್ನೆಲ್ಲ ಬೆಳೆಸಿ ಕ್ರೀಡಾಪಟುಗಳನ್ನಾಗಿಸುವ ಉದ್ದೇಶದಿಂದ ನಾಯಕನೇ ಸ್ವತಃ ಬಾಕ್ಸಿಂಗ್ ಪಟುವಾಗಿ ಬೆಳೆಯುವ ಪಣ ತೊಡುತ್ತಾನೆ.

'ಬಲ ಇದೆ ಅಂತ ಹೊಡೆದಾಡೋನು ರೌಡಿ ಆಗ್ತಾನೆ, ಆದರೆ ಬಲವಾದ ಕಾರಣಕ್ಕೆ ಹೊಡೆದಾಡೋನು ಯೋಧನಾಗುತ್ತಾನೆ' ಎನ್ನುವ ಸರ್ಕಾರ್‌ನ ಡೈಲಾಗ್ ಇಡೀ ಕಥೆಯನ್ನು ಹೇಳುವಂತಿದೆ. ಸಿನಿಮಾಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿದ್ದು, ಹಾಡುಗಳು ಮತ್ತೆ ಮತ್ತೆ ಗುನುಗಿಕೊಳ್ಳುವಂತೆ ಇವೆ. ಪೈಲ್ವಾನ್ ಹಿಂದಿ, ತಮಿಳು, ತೆಲುಗು, ಮಲಯಾಳಂನಲ್ಲೂ ತೆರೆಕಂಡಿದೆ. ಶರತ್ ಲೋಹಿತಾಶ್ವ, ಅವಿನಾಶ್, ಅಪ್ಪಣ್ಣ, ಸುಶಾಂತ್ ಕಬೀರ್ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಕಾವ್ಯ ಎನ್.

# ಆಚರಣೆಯಲ್ಲಿ ಅಡಗಿರುವ ವೈಜ್ಞಾನಿಕತೆ

**ಸಂಸ್ಕೃತಿ**
ಷಣ್ಮುಖಾರಾಧ್ಯ ಬಿ.ಜಿ.

ಭಾರತವು ತನ್ನದೇ ಆದ ಆಚಾರಣೆಗಳನ್ನು ಅನುಸರಿಸುತ್ತಾ ಬಂದಿದೆ. ಇವು ಹಿರಿಯರಿಂದ ತಿಳಿದು ಆಚರಿಸುವವನಿಗೆ ಆಚರಣೆಗಳಾಗಿ, ಓದಿ ತಿಳಿದವನಿಗೆ ವೈಜ್ಞಾನಿಕ ಚಿಂತನೆಗಳಾಗಿ ರೂಢಿಯಲ್ಲಿವೆ. ಭಾರತೀಯ ಆಚರಣೆಗಳು ತಮ್ಮದೇ ಆದ ಅರ್ಥವನ್ನು ಹೊಂದಿವೆ. ಆಚರಣೆಗಳಲ್ಲಿ ಯಾವುದೇ ಹುರುಳಿಲ್ಲ. ಅವು ಮೂಢನಂಬಿಕೆ ಎಂದು ವಾದಿಸುವರು ಅವುಗಳ ಹಿಂದಿನ ನೈಜತೆಯನ್ನು ಅರಿಯಬೇಕು.

ಹೆಣ್ಣುಮಕ್ಕಳು ತುಳಸಿ ಗಿಡಕ್ಕೆ ಪೂಜಿಸುವುದು ಏಕೆ ಎಂದು ಕೇಳಿದರೆ, ಅದರಲ್ಲಿ ದೇವರಿದ್ದಾನೆ. ಅದು ವಿಷ್ಣುವಿಗೆ ಪ್ರಿಯವಾದ ಗಿಡ ಎಂದು ಹೇಳುತ್ತಾರೆ. ಆದರೆ ಅದರ ಹಿಂದಿರುವ ವೈಜ್ಞಾನಿಕ ಅಂಶವನ್ನು ಗಮನಿಸಿದಾಗ, ತುಳಸಿ ಔಷಧೀಯ ಗುಣ ಉಳ್ಳ ಗಿಡವಾಗಿದ್ದು, ಹಲವಾರು ಕಾಯಿಲೆಗಳಿಗೆ ರಾಮಬಾಣವಾಗಿದೆ. ತುಳಸಿಗಿಡವು ಮನೆಯ ಮುಂದಿದ್ದಲ್ಲಿ ಯಾವುದೇ ಕ್ರಿಮಿ–ಕೀಟಗಳು ಸುಳಿಯದೆ ವಾತಾವರಣ ಪರಿಶುದ್ಧವಾಗಿರುತ್ತದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಅದೇ ರೀತಿ ಅರಳಿಮರವೂ ಹಾಗೆ, ತ್ರಿಮೂರ್ತಿಗಳು ನೆಲೆಸಿದ್ದಾರೆ ಎಂಬ ನಂಬಿಕೆಯಾದರೂ, ಅದು ವೃಕ್ಷ ರಾಜನಂತಿದ್ದು ವಿಶೇಷವಾದ ಮರವಾಗಿದೆ. ಇದು ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡ್‌ನ್ನು ತೆಗೆದುಕೊಂಡು ಯತೇಚ್ಛವಾದ ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ ಎನ್ನುವುದು ವೈಜ್ಞಾನಿಕ ಕಾರಣವಾಗಿದೆ. ಅಲ್ಲದೆ ಪೂಜಿಸುವವರು ಪ್ರದಕ್ಷಿಣೆ, ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ಸಣ್ಣದೊಂದು ವ್ಯಾಯಾಮ ಆಗುತ್ತದೆ. ಅಷ್ಟೇ ಅಲ್ಲದೆ ಅರಳಿ ಮರವಿದ್ದರೆ ಊರಿಗೊಬ್ಬ ನಾಟಿವೈದ್ಯನಿದ್ದಂತೆ ಎಂಬ ಮಾತು ಜನಜನಿತವಾದದ್ದು.



ಇದೇ ರೀತಿ ಮತ್ತೊಂದು ಆಚರಣೆಯನ್ನು ಗಮನಿಸಬಹುದು. ಮನೆಯಿಂದ ಯಾರಾದರೂ ಕೆಲಸಕ್ಕೆ ಹೊರಟಾಗ, ಅವರಿಗೆ ಮೊಸರು ಮತ್ತು ಸಕ್ಕರೆಯನ್ನು ನೀಡುವ ರೂಢಿಯಿದೆ. ಇದರ ಹಿಂದಿನ ವೈಜ್ಞಾನಿಕತೆಯನ್ನು ಗಮನಿಸಿದಾಗ ನಮ್ಮ ಜೀರ್ಣಾಂಗ ವ್ಯೂಹದಲ್ಲಿ ಮೆದೋಜೀರಕ ಗ್ರಂಥಿಯು ಪ್ರಮುಖ ಪಾತ್ರವಹಿಸುತ್ತದೆ. ಮೊಸರನ್ನು ಸೇವಿಸುವುದರಿಂದ ಈ ಗ್ರಂಥಿಯು ಉತ್ತಮವಾಗಿ ಕೆಲಸ ನಿರ್ವಹಿಸುತ್ತದೆ. ಅಲ್ಲದೇ ಸಕ್ಕರೆಯನ್ನು ಸೇವಿಸುವುದರಿಂದ ದೇಹಕ್ಕೆ ಗ್ಲೂಕೋಸ್ ಅಂಶ ಒದಗುತ್ತದೆ. ಇದರಿಂದ ಕ್ಯಾಲೋರಿ ಲಭಿಸಿ ಹೋದ ಕೆಲಸ ಯಾವುದೇ ತೊಂದರೆ ಇಲ್ಲದೆ ಸುಸೂತ್ರವಾಗಿ ಆಗುತ್ತದೆ ಎಂಬ ಅಂಶ ಸ್ಪಷ್ಟವಾಗಿದೆ.

ಆಚರಣೆಗಳು ಹಾಗೂ ವೈಜ್ಞಾನಿಕ ಚಿಂತನೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಮ್ಮ ಹಿರಿಯರು ನಂಬಿರುವ ಆಚರಣೆಗಳಲ್ಲಿ ಏಷ್ಟೊಂದು ಅರ್ಥ ಇದೆ ಅಲ್ಲವೇ? ಇಂತಹ ಅನೇಕ ಆಚರಣೆಗಳು ನಮ್ಮ ಭಾರತದಲ್ಲಿವೆ. ಆದರೆ ಅವುಗಳ ವೈಜ್ಞಾನಿಕ ಚಿಂತನೆ ತಿಳಿಯದೆ ಅವು ಮೂಢನಂಬಿಕೆ ಎನ್ನುತ್ತೇವೆ. ಆತ್ಮೀಯರೆ, ಇಂತಹ ಅನೇಕ ಅಂಶಗಳನ್ನು ನಾವು ಅಳವಡಿಸಿಕೊಳ್ಳುವ ಮೂಲಕ ಉತ್ತಮವಾದ ಆರೋಗ್ಯಕರವಾದ ಬಾಳನ್ನು ಬಾಳೋಣ.

**ಸಂಪಾದಕೀಯ ತಂಡ:** ನಿಸರ್ಗ ಸಿ.ಎ., ಸವಿತ ಜಿ., ಷಣ್ಮುಖಾರಾಧ್ಯ ಬಿ.ಜಿ. **ಪುಟವಿನ್ಯಾಸ:** ಉಮೇಶ । ಇದು ಖಾಸಗಿ ಪ್ರಸಾರದ ಪ್ರಾಯೋಗಿಕ ಪತ್ರಿಕೆ । ಸಲಹೆಗಳಿಗೆ ಸ್ವಾಗತ
**ಅಧ್ಯಾಪಕ ಮಾರ್ಗದರ್ಶಕರು:** ಸಿಬಂತಿ ಪದ್ಮನಾಭ ಕೆ.ವಿ., ಅನನ್ಯ ಎಂ., ಪೃಥ್ವೀರಾಜ್ ಟಿ. **ಸುದ್ದಿ ಹಾಗೂ ಅನಿಸಿಕೆಗಳನ್ನು ಈ ವಿಳಾಸಕ್ಕೆ ಕಳಿಸಿ:** journalismtut@gmail.com